(28)	- ಡಿಟೋ-	ಮಳವಳ್ಳಿ
15.ಮೈಸೂರು ಜಿಲ್ಲೆ :-		
(29)	- ಡಿಟೋ-	ಮೈಸೂರು
(30)	- ಡಿಟೋ-	ಗುಂಡ್ಲುಪೇಟೆ
16.ರಾಯಚೂರು ಜಿಲ್ಲೆ :-		
(31)	- ಡಿಟೋ-	ರಾಯಚೂರು
(32)	- ಡಿಟೋ-	ಕುಕನೂರು,ಯಲಬುರ್ಗಾತಾಲ್ಲೂಕು, ರಾಯಚೂರು ಜಿಲ್ಲೆ
17.ಶಿವಮೊಗ್ಗ ಜಿಲ್ಲೆ:-		
(33)	- ಡಿಟೋ-	ಶಿವಮೊಗ್ಗ (ಮಹಿಳಾ)
(34)	- ಡಿಟೋ-	ಭದ್ರಾವತಿ
18.ತುಮಕೂರು ಜಿಲ್ಲೆ :-		
(35)	- ಡಿಟೋ-	ತುಮಕೂರು
(36)	- ಡಿಟೋ-	ಅಮ್ಮಸಂದ್ರ
19.ಉತ್ತರ ಕನ್ನಡ ಜಿಲ್ಲೆ :-		
(37)	- ಡಿಟೋ-	ಕಾರವಾರ
(38)	- ಡಿಟೋ-	ಹೊನ್ನಾವರ
(39)	- ಡಿಟೋ-	ಹಳಿಯಾಳ

ವಿಷಯ:- ಗುಲ್ಬರ್ಗಾ ಜಿಲ್ಲೆಯಲ್ಲಿ ಕುಷ್ಠರೋಗ ನಿವಾರಣೆಯಾದ ಜನರ ದೇಯಾಂಶದತಿಯಲ್ಲಿ ನಗರ ವ್ಯಕ್ತಿಗಳ ನೇಮಕಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 369 (2036)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಗುಲ್ಬರ್ಗಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಂದ ಕೆಲವು ಮಂದಿ ಕುಷ್ಠರೋಗದಿಂದ ಗುಣ ಹೊಂದಿದವರಿಗೆಂದು ಮೀಸಲಾತಿ ಇರುವ ಕೋಟಾದಲ್ಲಿ ನೇಮಕಾತಿ ಹೊಂದಿರುವುದು ನಿಜವೇ ?

ಆ) ಹಾಗಾದರೆ ಕುಷ್ಠರೋಗದಿಂದ ಗುಣ ಹೊಂದಿದವರ ಮೀಸಲಾತಿಯಲ್ಲಿ ನೇಮಕಾತಿ ಹೊಂದಿದವರ ಸಂಖ್ಯೆ ಎಷ್ಟು?

ಇ) ಕುಷ್ಠರೋಗದಿಂದ ಗುಣಹೊಂದಿದವರೆಂದು ನಕಲಿ ವೈದ್ಯಕೀಯ ಪ್ರಮಾಣ ಪತ್ರ ತಂದ ಕೆಲವರು ಗುಲ್ಬರ್ಗಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಂದ ನೇಮಕಾತಿ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಾದರೆ ಅಂತಹ ನೇಮಕಾತಿಗಳನ್ನು ಪತ್ತೆ ಹಚ್ಚಲು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಶಿಕ್ಷಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಅ) 98

ಇ) ಹೌದು

ಈ) ಗುಲ್ಬರ್ಗಾ ವಿಭಾಗೀಯ ಜಂಟಿ ನಿರ್ದೇಶಕರಿಂದ ತನಿಖೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲು ವರದಿ ಕಳುಹಿಸಲು ಕೋರಿದೆ.

ವಿಷಯ:- ಕರ್ನಾಟಕ ಟೆಲಿಕಾಮ್ ನಿಯಮಿತ ಅಡಿಯಲ್ಲಿ ವಿಸ್ತರಣಾ ಕಾರ್ಯಕ್ರಮ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 374 (2015)

ಶ್ರೀ ಸಿ. ಭೈರೇಗೌಡ (ವೇಮಗಲ್) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) 1990 ರಿಂದ ಇಲ್ಲಿಯವರೆಗೆ ಕರ್ನಾಟಕ ಟೆಲಿಕಾಂ ಸಂಸ್ಥೆ ಕೈಗೊಂಡ ವಿಸ್ತರಣಾ ಯೋಜನೆಗಳು ಯಾವುವು ?

ಆ) ಇವುಗಳಲ್ಲಿ ಎಷ್ಟು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ:

ಇ) ಇವುಗಳಲ್ಲಿ ತೊಡಗಿಸಿರುವ ಬಂಡವಾಳ ಎಷ್ಟು ಮತ್ತು ಕೊಂಡಿರುವ ಯಂತ್ರಾದಿಗಳ ವಿವರ ಕೊಡುವುದು (ಯಂತ್ರಗಳನ್ನು ಯಾರಿಂದ ಕೊಳ್ಳಲಾಯಿತು ಮತ್ತು ಎಷ್ಟು ವೆಚ್ಚದಲ್ಲಿ ಕೊಳ್ಳಲಾಯಿತು ಎಂಬ ವಿವರವನ್ನು ಕೊಡುವುದು):

ಈ) ಪ್ರಾಜೆಕ್ಟ್ ವರದಿಗಳನ್ನು ತಯಾರಿಸಿದ ದಿನಾಂಕಗಳು ಯಾವುವು ?

ಉ) ವರದಿಗಳಿಗೆ ಕಂಪನಿಯು ಬೋರ್ಡ್ : ಸರ್ಕಾರದಿಂದ ಅನುಮತಿ ಪಡೆದಿದೆಯೇ ?

ಶ್ರೀಯುತ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕೈಗೊಂಡ ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ:

1)ಐಎಲ್‌ಟಿ-512 (ಒಂದನೇ ಹಂತ)
2)ಐಎಲ್‌ಟಿ-512 (ಎರಡನೇ ಹಂತ)
3) 10ಚಾನಲ್ ಯುಹೆಚ್‌ಎಫ್ ರೇಡಿಯೋ ರಿಲೇ ಎಕ್ಯೂಪ್‌ಮೆಂಟ್
4)ಸಿ-ಡಾಟ್ 512 (ಮ್ಯಾಕ್ಸ್)

ಆ) ಇವುಗಳಲ್ಲಿ, ಒಂದು ಯೋಜನೆಯನ್ನು ಪೂರ್ಣಗಳಿಸಲಾಗಿದೆ.

ಇ) 1) ಐಎವ್‌ಟಿ 512 (1 ನೇ ಹಂತ)ರೂ. 37,45,166-87
2) ಐಎಲ್‌ಟಿ 512 (2ನೇ ಹಂತ)ರೂ. 50,00,000-00
3) 10ಚಾನಲ್ ಯುಹೆಚ್‌ಎಫ್ ರೂ. 4,09,996-20
ರೇಡಿಯೋ ರಿಲೇ ಎಕ್ಟಿಪ್‌ಮೆಂಟ್
4) ಸಿ-ಡಾಟ್-512 (ಮ್ಯಾಕ್ಸ್) ರೂ.10,00,000-00
5) (ಉಳಿದ ವಿವರಗಳನ್ನು ಪಟ್ಟಿಯಲ್ಲಿ ನೀಡಿದೆ)

ವಿವರಗಳು ಈ ಕೆಳಕಂಡಂತೆ ಇದೆ :-

1) ಐಎಲ್‌ಟಿ-512 (ಒಂದನೇ ಹಂತ) 9-2-1990
2) ಐಎಲ್‌ಟಿ-512 (ಎರಡನೇ ಹಂತ) 12-7-1991
3) 10 ಚಾನಲ್ ಯುಹೆಚ್‌ಎಫ್ ರೇಡಿಯೋ ರಿಲೇ 12-7-1991
ಎಕ್ಯೂಪ್‌ಮೆಂಟ್
4) ಸಿ-ಡಾಟ್ 512 (ಮ್ಯಾಕ್ಸ್) 25-10-1991